ಕರ್ನಾಟಕ ಸರ್ಕಾರ

# ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 1–10–2014

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ವನ್ಯಜೀವಿ ಸಪ್ತಾಹ 2014<br>ವನ್ಯಜೀವಿ ಸಂರಕ್ಷಣೆಗಾಗಿ ನಡಿಗೆ<br><br>ಉದ್ಘಾಟನೆ:<br>ಶ್ರೀ ಬಿ. ರಮಾನಾಥ್ ರೈ,<br>ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು<br>ವಿಶೇಷ ಅತಿಥಿಗಳು:<br>ಶ್ರೀ ರಾಮಲಿಂಗಾರೆಡ್ಡಿ,<br>ಸಾರಿಗೆ ಸಚಿವರು<br>ಅಧ್ಯಕ್ಷತೆ:<br>ಶ್ರೀ ಆರ್. ರೋಷನ್ ಬೇಗ್,<br>ಮೂಲಭೂತ ಸೌಲಭ್ಯ ಅಭಿವೃದ್ಧಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಸಚಿವರು | 02–10–2014<br>ಗುರುವಾರ<br>ಬೆಳಿಗ್ಗೆ<br>7–00 ಗಂಟೆಗೆ | ಹೈಕೋರ್ಟ್ ಅಂಚೆ ಕಚೇರಿ ಗೇಟ್ ಮುಂಭಾಗದಿಂದ ಲಾಲ್‌ಬಾಗ್‌ವರೆಗೆ |
| 2 | ಮಾಜಿ ಪ್ರಧಾನ ಮಂತ್ರಿಗಳಾದ ದಿವಂಗತ ಲಾಲ್ ಬಹದ್ದೂರ್ ಶಾಸ್ತ್ರಿಯವರ 110 ನೇ ಜನ್ಮ ದಿನಾಚರಣೆ ಅಂಗವಾಗಿ ಅವರ ಪ್ರತಿಮೆಗೆ ಮುಖ್ಯಮಂತ್ರಿಗಳಿಂದ ಮಾಲಾರ್ಪಣೆ | 02–10–2014<br>ಗುರುವಾರ<br>ಬೆಳಿಗ್ಗೆ<br>10–00 ಗಂಟೆಗೆ | ವಿಧಾನ ಸೌಧದ ಪಶ್ಚಿಮ ದಿಕ್ಕಿನಲ್ಲಿರುವ ಅವರ ಪ್ರತಿಮೆ ಬಳಿ ಅವರ ಭಾವಚಿತ್ರಕ್ಕೆ |
| 3 | ವಿಧಾನ ಸೌಧ ಮತ್ತು ವಿಕಾಸ ಸೌಧ ಮಧ್ಯದ ಹುಲ್ಲು ಹಾಸಿನ ಆವರಣದಲ್ಲಿ ಧ್ಯಾನಾಸಕ್ತ ಮಹಾತ್ಮ ಗಾಂಧೀಜಿಯ ಪ್ರತಿಮೆಯ ಅನಾವರಣ<br>ಪ್ರತಿಮೆ ಅನಾವರಣ:<br>ಶ್ರೀ ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ<br>ಅಧ್ಯಕ್ಷತೆ: | 02–10–2014<br>ಗುರುವಾರ<br>ಬೆಳಿಗ್ಗೆ<br>10–30 ಗಂಟೆಗೆ | ವಿಧಾನ ಸೌಧದ ಮತ್ತು ವಿಕಾಸ ಸೌಧ ನಡುವೆ |

| | | | |
|---|---|---|---|
| | ಶ್ರೀ ಡಿ.ಹೆಚ್. ಶಂಕರಮೂರ್ತಿ,<br>ಸಭಾಪತಿಯವರು, ಕರ್ನಾಟಕ ವಿಧಾನ ಪರಿಷತ್ತು<br>ಮುಖ್ಯ ಅತಿಥಿಗಳು:<br>ಶ್ರೀ ಕಾಗೋಡು ತಿಮ್ಮಪ್ಪ,<br>ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ<br>ಶ್ರೀ ಟಿ.ಬಿ. ಜಯಚಂದ್ರ,<br>ಕಾನೂನು, ಸಂಸದೀಯ ವ್ಯವಹಾರಗಳು,<br>ಪಶುಸಂಗೋಪನೆ ಮತ್ತು ಮುಜರಾಯಿ ಸಚಿವರು<br>ಡಾ: ಹೆಚ್.ಸಿ. ಮಹಾದೇವಪ್ಪ,<br>ಲೋಕೋಪಯೋಗಿ ಸಚಿವರು | | |
| 4 | "ಸ್ವಚ್ಛ ಶಿವಾಜಿನಗರ " ಸಾರ್ವಜನಿಕ ಜಾಗೃತಿ ಕಾರ್ಯಕ್ರಮ ಮತ್ತು ರೋಡ್ ಶೋ<br><br>ಉದ್ಘಾಟನೆ:<br><br>ಶ್ರೀ ಆರ್. ರೋಷನ್ ಬೇಗ್,<br>ಮೂಲಭೂತ ಸೌಲಭ್ಯ ಅಭಿವೃದ್ಧಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಸಚಿವರು<br><br>ಸಂಪರ್ಕ: ಡಾ: ಸೈಯದ್ ಮೊಯಿದ್ದೀನ್<br>**9945278563** | **02–10–2014**<br>ಗುರುವಾರ<br>ಬೆಳಿಗ್ಗೆ<br>**10–30** ಗಂಟೆಗೆ | ಕರ್ನಲ್ ಹಿಲ್ ಇಂಗ್ಲೀಷ್ ಸ್ಕೂಲ್<br>ಕರ್ನಲ್ ಹಿಲ್ ರಸ್ತೆ,<br>ಸಿಎಸ್ಐ ಆಸ್ಪತ್ರೆ ಹತ್ತಿರ,<br>ಶಿವಾಜಿನಗರ,<br>ಬೆಂಗಳೂರು **–560 051** |
| 5 | ರಾಜೀವ್‌ಗಾಂಧೀ ಗ್ರಾಮೀಣ ವಸತಿ ನಿಗಮದ ವತಿಯಿಂದ ಅನುಷ್ಠಾನಗೊಳಿಸಿರುವ ಬಸವ ಯೋಜನೆ, ವಾಜಪೇಯಿ ನಗರ ವಸತಿ ಯೋಜನೆ ಹಾಗೂ ಇನ್ನಿತರ ಯೋಜನೆಗಳ ಅನುಷ್ಠಾನ ಪೂರ್ಣ ವಿವರಗಳ ಕೈಪಿಡಿ ಬಿಡುಗಡೆ ಕಾರ್ಯಕ್ರಮ:<br><br>ಶ್ರೀ ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ<br><br>ಪುಸ್ತಕ ಬಿಡುಗಡೆ:<br>ಶ್ರೀ ಅಂಬರೀಶ್<br>ವಸತಿ ಸಚಿವರು, | **02–10–2014**<br>ಗುರುವಾರ<br>ಬೆಳಿಗ್ಗೆ<br>**11–15** ಗಂಟೆಗೆ | ಕೊಠಡಿ ಸಂಖ್ಯೆ **313**<br>ವಿಧಾನ ಸೌಧ,<br>ಬೆಂಗಳೂರು |
| 6 | ಗಾಂಧಿ ಗ್ರಾಮ ಪುರಸ್ಕಾರ, ರಾಜ್ಯ ನೈರ್ಮಲ್ಯ | **02–10–2014** | ಬ್ಯಾಂಕ್ವೆಟ್ ಹಾಲ್ |

| | | | |
|---|---|---|---|
| | ಪ್ರಶಸ್ತಿ ಪ್ರದಾನ ಮತ್ತು ರಾಜೀವ್ ಗಾಂಧಿ ಪಂಚಾಯತ್ ಸಶಕ್ತೀಕರಣ ಅಭಿಯಾನದ ಪ್ರೋತ್ಸಾಹ ಧನ ವಿತರಣಾ ಸಮಾರಂಭ ;<br>ವಿಜೇತರಿಗೆ ಪ್ರೋತ್ಸಾಹಧನ ವಿತರಣೆ:<br>ಶ್ರೀ ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ<br>ರಾಜ್ಯ ನೈರ್ಮಲ್ಯ ಪ್ರಶಸ್ತಿ ಪ್ರದಾನ:<br>ಶ್ರೀ ಎಚ್.ಕೆ. ಪಾಟೀಲ್<br>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು<br>ಅಧ್ಯಕ್ಷತೆ:<br>ಶ್ರೀ ಆರ್. ರೋಷನ್ ಬೇಗ್<br>ಮೂಲಭೂತ ಸೌಲಭ್ಯ ಅಭಿವೃದ್ಧಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಸಚಿವರು<br>ಮುಖ್ಯ ಅತಿಥಿಗಳು:<br>ಶ್ರೀ ಕೆ.ಜೆ. ಜಾರ್ಜ್<br>ಗೃಹ ಸಚಿವರು, ಕರ್ನಾಟಕ ಸರ್ಕಾರ<br>ರಾಮಲಿಂಗಾರೆಡ್ಡಿ,<br>ಸಾರಿಗೆ ಸಚಿವರು<br>ಶ್ರೀ ದಿನೇಶ್ ಗುಂಡೂರಾವ್,<br>ಆಹಾರ ಮತ್ತು ನಾಗರಿಕ ಪೂರೈಕೆ ಸಚಿವರು | ಗುರುವಾರ<br>ಸಂಜೆ<br>4–30 ಗಂಟೆಗೆ | ವಿಧಾನ ಸೌಧ,<br>ಬೆಂಗಳೂರು |
| 7 | ಮಹಾತ್ಮಾ ಗಾಂಧೀ ಸೇವಾ ಪ್ರಶಸ್ತಿ– ಕರ್ನಾಟಕ ಪ್ರದಾನ ಸಮಾರಂಭ ಹಾಗೂ ಗಾಂಧೀ ಜಯಂತಿ ಅಂಗವಾಗಿ ವಿಶೇಷ ಪ್ರಕಟಣೆಗಳ ಬಿಡುಗಡೆ “ಕುಂಚದಲ್ಲಿ ಬಾಪು ನೆನಪು” ಕಲಾಕೃತಿಗಳು ಹಾಗೂ ಗಾಂಧೀ ಬಂದ ನಾಟಕ ಪ್ರದರ್ಶನ<br>ಪ್ರಶಸ್ತಿ ಪ್ರದಾನ:<br>ಶ್ರೀ ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ<br>ವಿಶೇಷ ಪ್ರಕಟಣೆ ಬಿಡುಗಡೆ:<br>ಶ್ರೀ ಆರ್. ರೋಷನ್ ಬೇಗ್,<br>ಮೂಲಭೂತ ಸೌಲಭ್ಯ ಅಭಿವೃದ್ಧಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಸಚಿವರು<br>ಮುಖ್ಯ ಅತಿಥಿಗಳು:<br>ಶ್ರೀ ಅನಂತಕುಮಾರ್, | 02–10–2014<br>ಗುರುವಾರ<br>ಸಂಜೆ<br>5–30 ಗಂಟೆಗೆ | ರವೀಂದ್ರ ಕಲಾಕ್ಷೇತ್ರ<br>ಬೆಂಗಳೂರು |

| | | | |
|---|---|---|---|
| | ಕೇಂದ್ರ ರಾಸಾಯನಿಕ ಹಾಗೂ ರಸಗೊಬ್ಬರ ಖಾತೆ ಸಚಿವರು | | |
| 8 | ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶ್ರೀ ಹೆಚ್. ಆಂಜನೇಯ ಅವರಿಂದ ಪತ್ರಿಕಾಗೋಷ್ಠಿ: | 06–10–2014 ಸೋಮವಾರ ಬೆಳಿಗ್ಗೆ 11–30 ಗಂಟೆಗೆ | ಕೊಠಡಿ ಸಂಖ್ಯೆ 334, ಸಮ್ಮೇಳನ ಸಭಾಂಗಣದ ಕೊಠಡಿ ಮೂರನೇ ಮಹಡಿ, ವಿಧಾನ ಸೌಧ, ಬೆಂಗಳೂರು |
| 9. | ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಶ್ರೀ ಹೆಚ್. ಆಂಜನೇಯ ಮಹರ್ಷಿ ವಾಲ್ಮೀಕಿ ಪ್ರಶಸ್ತಿ ಪುರಸ್ಕೃತ ಹೆಸರನ್ನು ಪ್ರಕಟಿಸುವ ಸಂಬಂಧ ಪತ್ರಿಕಾಗೋಷ್ಠಿ | 06–10–2014 ಸೋಮವಾರ ಮಧ್ಯಾಹ್ನ 12–30 ಗಂಟೆಗೆ | ಡಿ. ದೇವರಾಜ ಅರಸು ಭವನ, ಬೆಂಗಳೂರು. |

ನಿರ್ದೇಶಕರ ಪರವಾಗಿ

## ಬಕ್ರೀದ್ : ಸೋಮವಾರ ಸರ್ಕಾರಿ ರಜೆ

**ಬೆಂಗಳೂರು, ಅಕ್ಟೋಬರ್ 1, (ಕರ್ನಾಟಕ ವಾರ್ತೆ)**

ಬಕ್ರೀದ್ ಹಬ್ಬದ ಆಚರಣೆಗಾಗಿ ಅಕ್ಟೋಬರ್ 5 ರ ಬದಲಾಗಿ ಅಕ್ಟೊಬರ್ 6 ರಂದು ರಾಜ್ಯ ಸರ್ಕಾರ ರಜೆ ಘೋಷಿಸಿದೆ.

ಕೇಂದ್ರ Central Moon Committee) ಯ ಕೋರಿಕೆಯಂತೆ ಘೋಷಿಸಿರುವ ಈ ರಜೆಯು ನೆಗೋಷಿಯೇಬಲ್ ಇನ್ಸ್ಟ್ರುಮೆಂಟ್ಸ್ ಆಕ್ಟ್ 1881 ಅಧಿನಿಯಮ ಪರಿಚ್ಛೇದ 25 ರಂತೆ ಘೋಷಿಸಿರುವ ಈ ರಜೆಯು ಎಲ್ಲಾ ಬ್ಯಾಂಕುಗಳು, ಜೀವವಿಮಾ ನಿಗಮ ಹಾಗೂ ಇತರೆ ಸಂಸ್ಥೆಗಳಿಗೂ ಅನ್ವಯವಾಗಲಿದೆ.

## ಗ್ರಾಹಕ ಚಟುವಟಿಕೆ ನಡೆಸುತ್ತಿರುವ ಎನ್‌ಜಿಓಗಳಿಂದ ಅರ್ಜಿ ಆಹ್ವಾನ

**ಬೆಂಗಳೂರು, ಅಕ್ಟೋಬರ್ 1, (ಕರ್ನಾಟಕ ವಾರ್ತೆ)**

ಗ್ರಾಹಕ ಸಂರಕ್ಷಣಾ ಕಾಯ್ದೆ 1986 ರ ಅನ್ವಯ ಗ್ರಾಹಕರಿಗೆ ಹೆಚ್ಚಿನ ತಿಳುವಳಿಕೆ ನೀಡುವ ಸಲುವಾಗಿ ಗ್ರಾಹಕ ಸಂಬಂಧಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಪ್ರತಿ ಜಿಲ್ಲೆಯಲ್ಲಿ ಗ್ರಾಹಕ ಚಟುವಟಿಕೆ ನಡೆಸುತ್ತಿರುವ ಎನ್.ಜಿ.ಓ. /ವಿಸಿಎಸ್ ಯಿಂದ ಒಂದು ಜಿಲ್ಲಾ ಗ್ರಾಹಕ ಮಾಹಿತಿ ಕೇಂದ್ರವನ್ನು ತೆರೆಯಲು ಉದ್ದೇಶಿಸಲಾಗಿದೆ.

ಈ ಸಂಬಂಧ ಜಿಲ್ಲೆಯ ಜಿಲ್ಲಾದಿಕಾರಿಗಳಿಗೆ ಅರ್ಜಿ ಕರೆದು ಆಯ್ಕೆ ಮಾಡಲು ನಿರ್ದೇಶನ ನೀಡಲಾಗಿರುತ್ತದೆ. ಜಿಲ್ಲಾಧಿಕಾರಿಗಳು ಪತ್ರಿಕಾ ಪ್ರಕಟಣೆ ಹೊರಡಿಸಿದ ನಂತರ ಆಯಾ ಜಿಲ್ಲಾ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಆಸಕ್ತ ಎನ್‌ಜಿಓ/ವಿಸಿಓಸ್‌ಗಳು ತಮ್ಮ ಪೂರ್ಣ ಬಯೋಡಾಟಾ ಸಹಿತ ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ Rule 2(c) of State Consumer Welfare Fund Rule, 2005 ಅರ್ಜಿ (FormA1) ನಲ್ಲಿ ಸಲ್ಲಿಸಬಹುದಾಗಿದೆ.

ಆಯ್ಕೆಯಾದ ಎನ್.ಜಿ.ಓ/ವಿಸಿಎಸ್ ಸಂಸ್ಥೆಗಳಿಗೆ ಸರ್ಕಾರದ ವತಿಯಿಂದ ಗ್ರಾಹಕ ಚಟುವಟಿಕೆ ಕಾರ್ಯ ನಡೆಸುವ ಉದ್ದೇಶಕ್ಕಾಗಿ ಅನುದಾನವನ್ನು ಬಿಡುಗಡೆ ಮಾಡಲಾಗುವುದು. ಈ ಅನುದಾನವನ್ನು ಗ್ರಾಹಕ ಚಟುವಟಿಕೆಗಳಲ್ಲದೇ ಇತರೆ ಉದ್ದೇಶಗಳಿಗೆ ಬಳಸತಕ್ಕದ್ದಾಗಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಜಿಲ್ಲೆಯ ಜಿಲ್ಲಾಧಿಕಾರಿಗಳು/ಉಪ ನಿರ್ದೇಶಕರು, ಆಹಾರ, ನಾಗರಿಕ ಸರಬರಾಜುಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯವರನ್ನು ಸಂಪರ್ಕಿಸಲು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಪ್ರಕಟಣೆ ತಿಳಸಿದೆ.

## ಮೂಲ ದಾಖಲೆಗಳ ಪರಿಶೀಲನೆ

**ಬೆಂಗಳೂರು, ಅಕ್ಟೋಬರ್ 1, (ಕರ್ನಾಟಕ ವಾರ್ತೆ)**

ಕರ್ನಾಟಕ ಲೋಕಸೇವಾ ಆಯೋಗವು 2012ನೇ ಸಾಲಿನ 332–ಅಬಕಾರಿ ರಕ್ಷಕರು (ಪುರುಷ) ಮತ್ತು 18– ಅಬಕಾರಿ ರಕ್ಷಕರು (ಮಹಿಳೆ) ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ 1:2 ರ ಅನುಪಾತದಲ್ಲಿ ಅರ್ಹರಾದ ಅಭ್ಯರ್ಥಿಗಳಿಗೆ ಮೂಲ ದಾಖಲೆಗಳ ಪರಿಶೀಲನೆಯನ್ನು ದಿನಾಂಕ 15–10–2014 ರಿಂದ 17–10–2014 ರವರೆಗೆ ನಿಗದಿಪಡಿಸಿದ್ದು, ಸೂಚನಾ ಪತ್ರಗಳನ್ನು ಕಳುಹಿಸಲಾಗಿದೆ. ಸೂಚನಾ ಪತ್ರ ತಲುಪದೇ ಇರುವ ಅರ್ಹ ಅಭ್ಯರ್ಥಿಗಳು ಆಯೋಗದ ವೆಬ್‌ಸೈಟ್http://kpsc.kar.nic.in.home page ನಲ್ಲಿ ಪ್ರಕಟಿಸಿದರುವ ಅರ್ಹತಾ ಪಟ್ಟಿಯಲ್ಲಿನ ತಮ್ಮ ಹೆಸರು, ನೋಂದಣಿ ಸಂಖ್ಯೆ ಹಾಗೂ ಜನ್ಮ ದಿನಾಂಕಗಳನ್ನು ಖಚಿತಪಡಿಸಿಕೊಂಡು ದಿನಾಂಕ 13–10–2014 ರ ಒಳಗಾಗಿ ಆಯೋಗದ ಕೇಂದ್ರ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ಆಯೋಗದ ಪ್ರಕಟಣೆ ತಿಳಿಸಿದೆ.

## ಆಕ್ಷೇಪಣೆ, ಸಲಹೆ–ಸೂಚನೆಗಳನ್ನು ಸಲ್ಲಿಸಲು ಕಾಲಾವಕಾಶ

**ಬೆಂಗಳೂರು, ಅಕ್ಟೋಬರ್ 1, (ಕರ್ನಾಟಕ ವಾರ್ತೆ)**

ರಾಜ್ಯದ ಖಾಸಗಿ ಅನುದಾನರಹಿತ ಶಾಲೆಗಳಲ್ಲಿ ವಿಧಿಸಬಹುದಾದ ಶುಲ್ಕಗಳ ಕುರಿತಂತೆ ಸಮಿತಿಯನ್ನು ರಚಿಸಿ, ವಿಚಾರಣ ಸಂಕರಣಗಳನ್ನು ಏರ್ಪಡಿಸಿ, ನಂತರ ನಿಯಮಗಳನ್ನು ರೂಪಿಸಲು

ರಾಜ್ಯ ಉಚ್ಛನ್ಯಾಯಾಲಯವು ಸಂಬಂಧಿತ ಪ್ರಕರಣದಲ್ಲಿ ದಿನಾಂಕ 24-01-2014 ರಂದು ನೀಡಿದ ತೀರ್ಪಿನಲ್ಲಿ ಆದೇಶಿಸಿದ್ದಂತೆ ಶುಲ್ಕ ನಿಗಧಿ ಸಂಬಂಧ ವಿಚಾರ ಸಂಕಿರಣವನ್ನು ನಡೆಸಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿತ್ತು.

ಸರ್ಕಾರದ ನಿರ್ದೇಶನದಂತೆ ಶುಲ್ಕ ಪರಿಷ್ಕರಣ ಸಮಿತಿಯನ್ನು ರಚಿಸಿ, ಸಮಿತಿಯು ಸಲ್ಲಿಸಿರುವ ಶುಲ್ಕ ಪರಿಷ್ಕರಣ ವರದಿಯನ್ನು ಆಧರಿಸಿದ ಶುಲ್ಕ ನಿಗಧಿಯ ಕರಡು ನಿಯಮಗಳನ್ನು ಸಾರ್ವಜನಿಕರು/ಪೋಷಕರು/ಶಾಲಾ ಆಡಳಿತ ಮಂಡಳಿಗಳು/ಇತರೆ ಆಸಕ್ತರ ಗಮನಕ್ಕಾಗಿ ದಿನಾಂಕ 30-09-2014 ರಂದು ಇಲಾಖಾ ವೆಬ್‌ಸೈಟ್: www.schooleducation.kar.nic.in ನಲ್ಲಿ ಪ್ರಕಟಿಸಲಾಗಿದೆ. ಕರಡು ಶುಲ್ಕ ಪರಿಷ್ಕರಣಾ ವರದಿಯ ಬ್ಗೆ ಆಕ್ಷೇಪಣೆ, ಸಲಹೆ ಹಾಗೂ ಸೂಚನೆಗಳನ್ನು ಸಲ್ಲಿಸಲು 30 ದಿವಸಗಳ ಕಾಲಾವಕಾಶವಿದ್ದು, ಆಕ್ಷೇಪಣೆ, ಸಲಹೆ-ಸೂಚನೆಗಳನ್ನು ಸಲ್ಲಿಸಬಯಸುವವರು 'ನಿರ್ದೇಶಕರು, (ಪ್ರಾಥಮಿಕ ಶಿಕ್ಷಣ) ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು – 01 ರವರೆಗೆ ಖುದ್ದಾಗಿ ಅಥವಾ ನೋಂದಾಯಿತ ಅಂಚೆ ಮೂಲಕವಾಗಿ ಅಥವಾ ಇ-ಮೇಲ್ ಮೂಲಕ prydirector.edu.sgkar@nic.in ಈ ವಿಳಾಸಕ್ಕೆ ಕಳುಹಿಸುವಂತೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕವನ:ಜಿಪಿಆರ್.